**ಅ.ದಾ. ಸಂ. 170/2019 PW-1**

**ದಿನಾಂಕಃ 30.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು 6 ರಿಂದ 11 ನೇ ಪ್ರತಿವಾದಿ ಪರ ಶ್ರೀ. ಪಿ ವಿ ಎಲ್ ವಕೀಲರಿಂದಃ-

ನಾನು ಪಿಯುಸಿವರೆಗೂ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರು ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ನನಗೆ ಈಗ 70 ವರ್ಷ ವಯಸ್ಸು. ಪಹಣಿ ಪತ್ರಿಕೆಯಲ್ಲಿ ಹೆಸರು ಬದಲಾವಣೆಯಾಗಿರುವುದರಿಂದ ನಾನು ಪ್ರತಿವಾದಿಯವರ ವಿರುದ್ಧ ದಾವೆ ಹೂಡಿರುತ್ತೇನೆ. 2019 ನೇ ಇಸವಿಯಲ್ಲಿ ನಾನು ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಖಾತೆ ಬದಲಾವಣೆ ಆಗಿರುವುದನ್ನು ಪ್ರಶ್ನಿಸಿ ಅಪೀಲು ಮಾಡಿದ್ದೆ ಎಂದರೆ ಸರಿಯಲ್ಲ. ಆರ್ ಎ 336/2019 ಎಂದು ರಾಮನಗರ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಅಪೀಲು ಮಾಡಿದ್ದೆ ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ಸದರಿ ಅಪೀಲು ವಜಾ ಆದುದರಿಂದ ನನಗೆ ನೆನಪಿಲ್ಲ ಎಂದು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ತಮಗೆ ಹೇಗೆ ಬಂದಿರುತ್ತವೆ ಎಂದು ಹೇಳುವಿರಾ ಎಂದರೆ ಸಾಕ್ಷಿಯು 1953 ರಲ್ಲಿ ನನ್ನ ತಾತ ಅಪ್ಪಾಜಿಗೌಡ ರವರು ಬಸವೇಗೌಡ ಬಿನ್ ಮಲ್ಲೇಗೌಡರವರಿಂದ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ತದನಂತರ ನನ್ನ ತಂದೆ ಮತ್ತು ಸಹೋದರರರು ವಿಭಾಗ ಮಾಡಿಕೊಂಡಿದ್ದು 1984 ರಲ್ಲಿ ದಾವಾ ಆಸ್ತಿಗಳು ನನ್ನ ತಂದೆಯ ಭಾಗಕ್ಕೆ ಬಂದಿದ್ದು ತದನಂತರ ನಾನು ಮತ್ತು ಸಹೋದರರರು ವಿಭಾಗ ಮಾಡಿಕೊಂಡಿದ್ದು 1990 ರಲ್ಲಿ ಭಾಗ ಮಾಡಿಕೊಂಡಿದ್ದು ಆ ಮಾಲಕ ದಾವಾ ಆಸ್ತಿಗಳು ನನ್ನ ಭಾಗಕ್ಕೆ ಬಂದಿರುತ್ತವೆ. ತಮ್ಮ ತಾತ ಖರೀದಿ ಮಾಡುವ ಕಾಲಕ್ಕೆ ದಾವಾ ಆಸ್ತಿಯ ಕಂದಾಯ ದಾಖಲೆಗಳು ಪರಿಶೀಲಿಸಿದ್ದರಾ ಎಂದರೆ ಸಾಕ್ಷಿ ಪರಿಶೀಲಿಸಿದ್ದರು ಎನ್ನುತ್ತಾರೆ. ತಮ್ಮ ತಾತ

ದಾವ ಆಸ್ತಿಗಳನ್ನು ಖರೀದಿಸಿದ್ದರು ಎಂದು ತಾವು ಹೇಳಿದ್ದು ಖರೀದಿ ಮಾಡಿದ ನಂತರ ಅವರ ಹೆಸರಿಗೆ ಖಾತೆ ಆಗಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ನಿಂಗೇಗೌಡರಿಗೆ ಒಟ್ಟು 5 ಜನ ಮಕ್ಕಳು ಅದರಲ್ಲಿ 3 ಹೆಣ್ಣು ನಾನು ಸೇರಿ 2 ಗಂಡು. ತಮ್ಮ ತಾತ ಅಪ್ಪಾಜಿಗೌಡ ಉಃ ನಿಂಗೇಗೌಡರವರಿಗೆ ನನ್ನ ತಂದೆಯೂ ಸೇರಿ 4 ಜನ ಗಂಡು ಮಕ್ಕಳು 2 ಜನ ಹೆಣ್ಣು ಮಕ್ಕಳು ಎನ್ನುತ್ತಾರೆ. ಹೆಣ್ಣು ಮಕ್ಕಳ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ತಮ್ಮ ತಂದೆ ಮತ್ತು ಸಹೋದರರ ನಡುವೆ ದಾವಾ ಆಸ್ತಿಯು ಯಾವ ರೀತಿ ವಿಭಾಗ ಆಗಿರುತ್ತವೆ ಎಂದರೆ ಸಾಕ್ಷಿಯು  ಪಂಚಾಯಿತಿ ಪಾಲು ಪಾರಿಕತ್ ಮುಖಾಂತರ ಎನ್ನುತ್ತಾರೆ. ಪಂಚಾಯಿತಿ ಪಾಲು ಪಾರಿಕತ್ ನ್ಯಾಯಾಲಯಕ್ಕೆ ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪಂಚಾಯಿತಿ ಪಾಲು ಪಾರಿಕತ್ ಮೂಲಕ ಖಾತೆ ಬದಲಾವಣೆ ಆಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಸಾಕ್ಷಿ ಎಂ.ಆರ್. ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ತಮ್ಮ ತಂದೆ ಮತ್ತು ತಮ್ಮ ತಂದೆಯ ಸಹೋದರರ ನಡುವೆ ಪಂಚಾಯಿತಿ ಪಾಲು ಪಾರಿಕತ್ ಮೂಲಕ ಆಸ್ತಿಗಳು ವಿಭಾಗ ಆಗಿರುತ್ತವೆ ಎಂದು ಹೇಳಿದ್ದು ಯಾವ ಯಾವ ಸರ್ವೆ ನಂಬರ್ ಆಸ್ತಿಗಳು ಯಾರು ಯಾರಿಗೆ ಹೋಗಿರುತ್ತವೆ ಎಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು  ವಿಭಾಗದ ಮೂಲಕ ತಮ್ಮ ತಂದೆಯ ಭಾಗಕ್ಕೆ ಬಂದಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತಮ್ಮ ಮತ್ತು ತಮ್ಮ ಸಹೋದರರ ನಡುವೆ ಪಂಚಾಯಿತಿ ಪಾಲು ಪಾರಿಕತ್ ಆಗಿ ಸದರಿ  ಪಂಚಾಯಿತಿ ಪಾಲು ಪಾರಿಕತ್ ಮೂಲಕ ದಾವಾ ಆಸ್ತಿಗಳು ತಮ್ಮ ಭಾಗಕ್ಕೆ ಬಂದಿರುತ್ತವೆ ಎಂದು ಹೇಳಿದ್ದು ಸದರಿ  ಪಂಚಾಯಿತಿ ಪಾಲು ಪಾರಿಕತ್ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎನ್ನುತ್ತಾರೆ. ಯಾವ ದಿನಾಂಕ ಇಸವಿಯಲಿಲ  ಪಂಚಾಯಿತಿ ಪಾಲು ಪಾರಿಕತ್ ಆಗಿರುತ್ತದೆ ಎಂದು ಹೇಳುವಿರಾ ಎಂದರೆ ಸಾಕ್ಷಿ ದಿನಾಂಕ ತಿಂಗಳು ಹೇಳಲು ಆಗುವುದಿಲ್ಲ, ಆದರೆ 1999 – 2000 ಇಸವಿಯಲ್ಲಿ ಎಂದು ನುಡಿಯುತ್ತಾರೆ.  ತಮ್ಮ ಮತ್ತು ತಮ್ಮ ಸಹೋದರರ ನಡುವೆ  1999 -2000 ಪಂಚಾಯಿತಿ ಪಾಲು ಪಾರಿಕತ್

ಆಗಿದೆ ಎಂದು ತಾವು ಹೇಳಿದ್ದು ಆ ಕಾಲಕ್ಕೆ ದಾವಾ ಆಸ್ತಿಗಳು ತಮ್ಮ ತಂದೆಯ ಹೆಸರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚಾಯಿತಿ ಪಾಲು ಪಾರಿಕತ್ ಆಗದೇ ಇದ್ದರೂ, ತಮ್ಮ ತಂದೆಯ ಹೆಸರಿಗೆ ಕಂದಾಯ ದಾಖಲೆಗಳು ಇಲ್ಲದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತಾವು ದಾವಾ ಆಸ್ತಿಯ ಮಾಲೀಕರು ಎಂದು ತೋರಿಸಲು ಯಾವುದೇ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಾನು ಸ್ವಾಧೀನ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ರಾಮನಗರ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ನಾನು ಮೇಲ್ಮನವಿ ಸಂ ಃ 291/2014-15 ನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿಯನ್ನು ಯಾರು , ಯಾವ ವಿಚಾರಕ್ಕಾಗಿ ಸಲ್ಲಿಸಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಶಿವಲಿಂಗಯ್ಯ ಎನ್ನುವವರು ಸಲ್ಲಿಸಿದ್ದರು ಎನ್ನುತ್ತಾರೆ. ಉಪವಿಭಾಗಾಧಿಕಾರಿಗಳು ಆರ್ ಎಂ 291/2014-15 ರಲ್ಲಿ ವಿಚಾರಣೆ ಮಾಡಿ ತಹಶೀಲ್ದಾರ್ ಚನ್ನಪಟ್ಟಣರವರ ನ್ಯಾಯಾಲಯಕ್ಕೆ ರಿಮ್ಯಾಂಡ್ ಮಾಡಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.12 ರ ಜಮೀನಿನ ಮೂಲ ಮಾಲೀಕರು ಯಾಲಕ್ಕಿ ಎಂಬುವವರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಯಾಲಕ್ಕಿ ರವರು ಸರ್ವೆ ನಂ.12 ರ ಜಮೀನಿನ ಮೂಲ ಮಾಲೀಕರಿದ್ದು 1932 ರಲ್ಲಿ ಕೆಂಪ ಮತ್ತು ಬೋರ ಎಂಬುವವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾರಿರುವ ವಿಚಾರ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ಮತ್ತು ಸ್ವಾಧೀನ ಇರುವವರು ಪ್ರತಿವಾದಿ 6 ರಿಂದ 11 ರವರೇ ಎಂದರೆ ಸರಿಯಲ್ಲ. 6 ರಿಂದ 11 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯನ್ನು ಪ್ರತಿವಾದಿ 6 ರಿಂದ 11 ರವರ ವಿರುದ್ಧ ಈ ದಾವೆಯಲ್ಲಿ ಏನು ಪರಿಹಾರ ಕೋರಿದ್ದೀರಿ ಎಂದರೆ ಸಾಕ್ಷಿ ನಾನು ಪ್ರತಿವಾದಿ 6 ರಿಂದ 11 ರವರನ್ನು ಪಕ್ಷಗಾರರಾಗಿಯೇ ತಂದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳಿಗೆ ಪ್ರತಿವಾದಿ 6 ರಿಂದ 11 ರವರು ಮತ್ತು ಅವರ ಪೂರ್ವಿಕರೇ ಮಾಲೀಕರಾಗಿದ್ದು ಅದನ್ನು ಮರೆ ಮಾಚಿ ನಾನು

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ನಾನು ನನ್ನ ದಾವಾ ಪತ್ರದ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ